RNU AIR DHARWAD

**DECEMBER 29,2024**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವವರು: ವಿವೇಕಾದಿತ್ಯ ಕನಿಯಾಲ**

<><><>

**2025ರ ಜನೆವರಿ 26 ಕ್ಕೆ, ಭಾರತದ ಸಂವಿಧಾನ ಜಾರಿಗೆ ಬಂದು, 75 ವರ್ಷಗಳು ಪೂರ್ಣಗೊಳ್ಳುವ ಹಿನ್ನೆಲೆ, ವರ್ಷಪೂರ್ತಿ ವಿಶೇಷ ಕಾರ್ಯಕ್ರಮಗಳು, ಪ್ರಾರಂಭಗೊಂಡಿವೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ, 'ಮನ್ ಕಿ ಬಾತ್'ನ 117ನೇ ಆವೃತ್ತಿಯಲ್ಲಿ, ತಿಳಿಸಿದ್ದಾರೆ. ದೇಶ–ವಿದೇಶಗಳ ಜನತೆಯನ್ನುದ್ದೇಶಿಸಿ, ಇಂದು ಬೆಳಗ್ಗೆ 11 ಗಂಟೆಗೆ, ಆಕಾಶವಾಣಿಯ ಬಹುಚರ್ಚಿತ, ಮನದ ಮಾತಿನಲ್ಲಿ, ಈ ಮಾಹಿತಿಯನ್ನು ಪ್ರಧಾನಮಂತ್ರಿ ಹಂಚಿಕೊಂಡರು. ದೇಶದ ನಾಗರಿಕರನ್ನು, ಸಂವಿಧಾನ ಪರಂಪರೆಯೊಂದಿಗೆ ಜೋಡಿಸಲು, CONSTITUITON75.COM ಜಾಲತಾಣವನ್ನು ರೂಪಿಸಲಾಗಿದೆ. ಸಂವಿಧಾನ ಪೀಠಿಕೆಯನ್ನು ಓದಿ, ವಿಡಿಯೋ ಲಗತ್ತಿಸಲು, ಪ್ರಾವಧಾನವಿದೆ ಎಂದರು. 'ಬಸ್ತರ್ ಒಲಿಂಪಿಕ್ಸ್' ಬಗ್ಗೆ ವಿಶೇಷವಾಗಿ ಉಲ್ಲೇಖಿಸಿದ ಅವರು, ಸ್ಥಳೀಯ ಕ್ರೀಡಾ ಪ್ರತಿಭೆಗಳನ್ನು ಪ್ರೋತ್ಸಾಹಿಸುವಂತೆ, ಕ್ರೀಡಾ ಕ್ಷೇತ್ರದ ಯಶೋಗಾಥೆಗಳನ್ನು ತಮ್ಮೊಂದಿಗೆ ಹಂಚಿಕೊಳ್ಳುವಂತೆ, ಮನದ ಮಾತಿನ ಕೇಳುಗರಲ್ಲಿ ಅವರು ಕೋರಿದರು.**

<><><>

**ಅಡಕೆ ಕ್ಯಾನ್ಸರ್ ಕಾರಕವಲ್ಲ, ಆದರೆ, ಉತ್ತಮ ಬಣ್ಣಕ್ಕಾಗಿ ಅಡಕೆಗೆ ರೆಡ್ ಆಕ್ಸೈಡ್ ಸೇರಿಸುವುದರಿಂದ, ತೊಂದರೆ ಉಂಟಾಗಿದೆ ಎಂದು, ಕೇಂದ್ರ ಕಾರ್ಮಿಕ ಖಾತೆ ರಾಜ್ಯ ಸಚಿವರಾದ ಶೋಭಾ ಕರಂದ್ಲಾಜೆ ತಿಳಿಸಿದ್ದಾರೆ. ಬೆಂಗಳೂರಿನ ಅರಮನೆ ಮೈದಾನದಲ್ಲಿ, ತೃತೀಯ ವಿಶ್ವ ಹವ್ಯಕ ಸಮ್ಮೇಳನದ ಎರಡನೇ ದಿನದಂದು, ಸಾಕ್ಷಾತ್ಕಾರ ಸಭಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಹಣ್ಣಡಿಕೆಯನ್ನು ಒಣಗಿಸುವುದರಿಂದ ಅಲ್ಲಿ ಸಮಸ್ಯೆ ಇಲ್ಲ. ಅಡಕೆ ಬೇಯಿಸುವ ಪದ್ಧತಿ ಇರುವಲ್ಲಿ ರೆಡ್ ಆಕ್ಸೈಡ್ ಮಿಶ್ರಣ ನಡೆಯುತ್ತದೆ. ಅಲ್ಲದೆ, ದೆಹಲಿ ಮತ್ತಿತರ ಕಡೆಗಳಲ್ಲಿ ಗುಟ್ಕಾವನ್ನೇ ಅಡಕೆ ಎಂದು ಭಾವಿಸಿರುವುದು ಕೂಡಾ ಸಮಸ್ಯೆಗೆ ಕಾರಣವಾಗಿದೆ. ಅಡಕೆ ಬಗೆಗಿನ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿದೆ. ಅಡಕೆ ಬೆಳೆಗಾರರ ಪರ ಪ್ರಧಾನಮಂತ್ರಿ ನರೇಂದ್ರ ಮೋದಿಯವರಿದ್ದಾರೆ. ಅವರ ನಿರ್ದೇಶನದಂತೆ ಸುಪ್ರೀಂ ಕೋರ್ಟ್ ನಲ್ಲಿ ರೈತರ ಪರ ವಾದ ಮಂಡಿಸಲಾಗಿದೆ, ಎಂದರು.**

<><><>

**ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಶ್ರೀ ಮೂರುಸಾವಿರ ಮಠದ 'ಮೂಜಗಂ ಸಭಾಭವನ'ದಲ್ಲಿ ಸಹಜ ಸಮೃದ್ಧ ಹಾಗೂ ಕ್ರಾಫ್ಟ್ ಫಾರ್ ಎಚ್.ಡಿ. ಸಂಸ್ಥೆ ಆಯೋಜಿಸಿರುವ ಗೆಡ್ಡೆ–ಗೆಣಸು ಮೇಳಕ್ಕೆ, ಹುಬ್ಬಳ್ಳಿ ಶಾಸಕ ಪ್ರಸಾದ್ ಅಬ್ಬಯ್ಯ ಚಾಲನೆ ನೀಡಿದ್ದಾರೆ. ಗೆಡ್ಡೆ ಗೆಣಸುಗಳು, ಮಾನವನ ಹಸ್ತಕ್ಷೇಪ ಇಲ್ಲದೇ ಬೆಳೆಯಬಲ್ಲ, ಪೌಷ್ಟಿಕಾಂಶಗಳ ಆಗರವಾಗಿವೆ ಎಂದು,**

ಮೈಸೂರಿನ ಸಹಜ ಸಮೃದ್ಧದ ನಿರ್ದೇಶಕ ಜಿ.ಕೃಷ್ಣಪ್ರಸಾದ ಹೇಳಿದರು. 'ಯಾಕೊನ್ ಬೀನ್ಸ್' ಬೆಳೆಯನ್ನು ಉತ್ತರ ಕರ್ನಾಟಕ ಭಾಗದಲ್ಲಿ ಪರಿಚಯಿಸುವ ಉದ್ದೇಶವಿದೆ. ಇದರಿಂದ ಸಕ್ಕರೆ ತಯಾರಿಸಬಹುದು, ಎಂದರು.

<><><>

ಗೃಹಲಕ್ಷ್ಮೀ ಯೋಜನೆ ಫಲಾನುಭವಿ, ಯಾದಗಿರಿ ಜಿಲ್ಲೆ ಹುಣಸಗಿ ತಾಲೂಕು ಹೆಬ್ಬಾಳ ಗ್ರಾಮದ ಮಕ್ತುಂಬಿ ನಬಿಸಾಬ್ ಐದು ಕಂತುಗಳ ಒಟ್ಟು 10 ಸಾವಿರ ರೂಪಾಯಿ ಹಣದಲ್ಲಿ, ತರಕಾರಿ ತಳ್ಳುಗಾಡಿ ಖರೀದಿಸಿ, ವ್ಯಾಪಾರ ಆರಂಭಿಸಿ, ಸ್ವಾವಲಂಬಿ ಜೀವನ ನಡೆಸುತ್ತಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಅವರು ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಮಕ್ತುಂಬಿ ನಬಿಸಾಬ್ ಧ್ವನಿ  ಸೆಕೆಂದುಗಳು

<><><>

ಉಡುಪಿ ಜಿಲ್ಲೆ, ಬ್ರಹ್ಮಾವರ ತಾಲೂಕು ಪತ್ರಕರ್ತರ ಸಂಘದಿಂದ ನೀಡಲಾಗುವ, ವಡ್ಡರ್ಸೆ ರಘುರಾಮ ಶೆಟ್ಟಿ ಪತ್ರಿಕೋದ್ಯಮ ಪ್ರಶಸ್ತಿಗೆ, ಹಿರಿಯ ಪತ್ರಕರ್ತ ರವಿ ಹೆಗಡೆ ಆಯ್ಕೆಯಾಗಿದ್ದಾರೆ. ಜನೆವರಿ 11 ರಂದು ಬ್ರಹ್ಮಾವರ ಬಂಟರ ಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು, ಉಣಕಲ್ ಬಳಿಯ ಸಾಯಿ ನಗರದ, ಅಯ್ಯಪ್ಪಸ್ವಾಮಿ ಸನ್ನಿಧಾನದಲ್ಲಿ ನಡೆದ, ಗ್ಯಾಸ್ ಸಿಲಿಂಡರ್ ಸೋರಿ, ಬೆಂಕಿ ಅವಘಡದಲ್ಲಿ, ತೀವ್ರ ಗಾಯಗೊಂಡು ಕೆ.ಎಂ.ಸಿ.–ಆರ್.ಐ. ನಲ್ಲಿ ದಾಖಲಾಗಿರುವ ಐವರಿಗೆ ಚಿಕಿತ್ಸೆ ಮುಂದುವರಿದಿದೆ. ಆಸ್ಪತ್ರೆ ನಿರ್ದೇಶಕ ಡಾಕ್ಟರ್ ಎಸ್.ಎಫ್ ಕಮ್ಮಾರ ಮಾಹಿತಿ ನೀಡಿ, ಪರಿಸ್ಥಿತಿ ಗಂಭೀರವಾಗಿದೆ. ರಕ್ತದೊತ್ತಡ, ನಾಡಿ ಮಿಡಿತ ಯಥಾಸ್ಥಿತಿಯಲ್ಲಿದೆ ಎಂದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..

<><><>